# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಶಿಡ್ಲಘಟ್ಟ

## ಸಿ ಸಿ ನಂ. 1470/2021

**ಪಿ ಡಬ್ಲ್ಯು.. 1**

ಪ್ರಮಾಣವಚನದ ನಂತರದ ದಿಃ **28.03.2024**

ಪಾಟೀಸವಾಲು ಆರೋಪಿ ಪರ ವಕೀಲರಾದ ಶ್ರೀ ಎಕೆ ವಕೀಲರಿಂದ -

ನಾನು ವ್ಯವಸಾಯ ಮಾಡಿಕೊಂಡಿದ್ದೇನೆ. ವ್ಯವಸಾಯದ ಜೊತೆಗೆ ನಾನು ಸಣ್ಣ ಪುಟ್ಟ ಕಾಮಗಾರಿ ಗುತ್ತಿಗೆಗಳನುನ ಮಾಡಿಸುತ್ತೇನೆ. ನಾನು ಈರುಳ್ಳಿ ವ್ಯಾಪಾರವನ್ನು ಸಹ ಮಾಡುತ್ತೇನೆ. ಇವುಗಳನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರಗಳನ್ನು ಮಾಡುವುದಿಲ್ಲ. ಆರೋಪಿ ದೇವನಹಳ್ಳಿಯಲ್ಲಿರುವ ನಂಜೇಗೌಡ ಎನ್ನುವವರ ಬಳಿ ಬರುತ್ತಿದ್ದರು. ಆರೋಪಿ ನನಗೆ **2014-15** ರಿಂದ ಪರಿಚಯ ಇರುತ್ತಾರೆ. ಪಿರ್ಯಾದಿನಲ್ಲಿ ಹೇಳಿರುವ ವ್ಯವಹಾರವನ್ನು ಹೊರತುಪಡಿಸಿ ನನ್ನ ಮತ್ತು ಆರೋಪಿ ಮದ್ಯೆ ಬೇರೆ ಯಾವುದೇ ವ್ಯವಹಾರ ಇರಲಿಲ್ಲ. ದೊಡ್ಡಬಳ್ಳಾಪುರ ತಾಲೂಕು ಲಿಂಗನಹಳ್ಳಿ ಗ್ರಾಮದಲ್ಲಿ ಇರುವ ಸರ್ವೆ ನಂ.**279/4** ರಲ್ಲಿ ಇರುವ **33** ಗುಂಟೆ ಜಮೀನನ್ನು ಆರೋಪಿಯ ತಾಯಿಯ ಹೆಸರಿನಲ್ಲಿ ಇರುತ್ತದೆ. ಆರೋಪಿಯ ತಾಯಿಯ ಹೆಸರು ರತ್ನಮ್ಮ.

**2.** ಸದರಿ **33** ಗುಂಟೆಗೆ ಕ್ರಯದ ಬೆಲೆ **30** ಲಕ್ಷಕ್ಕೆ ನಿಗದಿ ಆಗಿತ್ತು. ಸದರಿ ಸ್ವತ್ತಿನ ಮಾರಾಟದ ಮಾತುಕತೆಯ ಸಮಯದಲ್ಲಿ ಯಾರು ಯಾರು ಭಾಗವಹಿಸಿದರು ಎಂದು ನನಗೆ ನೆನಪಿಲ್ಲ. ಸದರಿ ಸ್ವತ್ತಿನ ಮಾತುಕತೆ **2016 5** ಅಥವಾ **6** ನೇ ತಿಂಗಳಿನಲ್ಲಿ ದೇವನಹಳ್ಳಿಯ ನಂಜೇಗೌಡರ ಮನೆಯಲ್ಲಿ ನಡೆದಿರುತ್ತದೆ. ದಿನಾಂಕ ನನಗೆ ನೆನಪಿರುವುದಿಲ್ಲ. ಕರಾರು ಪತ್ರವನ್ನು ನನಗೆ ರತ್ನಮ್ಮ ಹಾಗೂ ಆರೋಪಿ ಇಬ್ಬರು ಸಹ ಮಾಡಿಕೊಟ್ಟಿರುತ್ತಾರೆ. ಸದರಿ ಸ್ವತ್ತು ರತ್ನಮ್ಮನವರಿಗೆ ಹೇಗೆ ಬಂದಿರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಸದರಿ ರತ್ನಮ್ಮನವರಿಗೆ ಎಷ್ಟು ಜನ ಮಕ್ಕಳು ಎಂದು ನಾನು ತಿಳಿದುಕೊಂಡಿರುವುದಿಲ್ಲ. ಸ್ವತ್ತಿಗೆ ಸಂಬಂದ ಪಟ್ಟಂತೆ ರತ್ನಮ್ಮನವರ ಹೆಸರಿನಲ್ಲಿದ್ದ ಪಹಣಿಯನ್ನು ನಾನು ನೋಡಿದ್ದೇನೆ. ಸಾಕ್ಷಿಗೆ ಈಗ

ಒಂದು ಪಹಣಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ಪಹಣಿಯನ್ನು ನೋಡಿ ಒಪ್ಪಿಕೊಂಡಿದ್ದು ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ನಿಡಿ.1 ರಲ್ಲಿ ಕಾಲಂ ನಂ.11 ರಲ್ಲಿ ಸದರಿ ಸ್ವತ್ತಿಗೆ ಸಂಬಂದ ಪಟ್ಟಂತೆ ವ್ಯಾಜ್ಯಗಳು ಬಾಕಿ ಇರುವ ಬಗ್ಗೆ ನೀವು ಗಮನಿಸಿದ್ದೀರಾ ಎಂದರೆ ಸಾಕ್ಷಿ ನನಗೆ ತೋರಿಸಿದ ಪಹಣಿಯಲ್ಲಿ ಆಗ ನಮೂದು ಇರಲಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ಮತ್ತೊಂದು ಪಹಣಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ಪಹಣಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ.2 ಎಂದು ಗುರುತಿಸಲಾಯಿತು. ಮೇಲಿನ ವಿಚಾರಗಳನ್ನು ನಾನು ನನ್ನ ಪಿರ್ಯಾದಿನಲ್ಲಿ ಏಕೆ ಹೇಳಿರಲಿಲ್ಲ ಎಂದರೆ ಸಾಕ್ಷಿ ವ್ಯಾಜ್ಯಗಳು ಇರುವ ವಿಚಾರ ನಂತರ ನನಗೆ ತಿಳಿದುಬಂದಿದ್ದಾಗಿ ಹೇಳುತ್ತಾರೆ. ದ

**3.** ನೀವು ನಿಮ್ಮ ಪಿರ್ಯಾದಿನಲ್ಲಿ ಹೇಳಿರುವ ದಿಃ**18.08.2016** ರ ಕರಾರು ಪತ್ರವನ್ನು ಏಕೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಸದರಿ ಕರಾರು ಪತ್ರವನ್ನು ಆರೋಪಿ ವಾಪಸು ತೆಗೆದುಕೊಂಡು ನನಗೆ ಚೆಕ್ ನೀಡಿರುವುದಾಗಿ ಹೇಳುತ್ತಾರೆ. ಸದರಿ ವಿಚಾರವನ್ನು ಏಕೆ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸಾಕ್ಷಿ ನಾನು ಕರಾರು ಪತ್ರವನ್ನು ಆರೋಪಿಗೆ ನೀಡಿದ್ದು ಆತ ನೀಡಿದ ಚೆಕ್ ? ಬೌನ್ಸಾಡ್ಡರಿಂದ ನಾನು ಈ ದೂರನ್ನು ನೀಡಿರುವುದಾಗಿ ಹೇಳುತ್ತಾರೆ. ಕರಾರು ಪತ್ರ ಆದಾಗ ನಾನು ಪೂರ್ಣ **30** ಲಕ್ಷ ಹಣವನ್ನು ಆರೋಪಿ ಹಾಗೂ ಆತನ ತಾಯಿಗೆ ನೀಡಿರುತ್ತೇನೆ. ಸದರಿ **30** ಲಕ್ಷ ಹಣವನ್ನು ನಾನು **3-4** ಬಾರಿ ಆರೋಪಿ ತಾಯಿ ಆಸ್ಪತ್ರೆ ಖರ್ಚಿಗೆ ಬೇಕು ಎಂದು ಕೇಳಿದರಿಂದ ನಗದು ರೂಪದಲ್ಲಿ ಆರೋಪಿಗೇ ನೀಡಿರುತ್ತೇನೆ. ಎಷ್ಟು ಎಷ್ಟು ಹಣ ಯಾವ ದಿನಾಂಕದಂದು ನೀಡಿದ್ದೇನೆ ಎಂದು ಹೇಳಲಾಗುವುದಿಲ್ಲ. ನಾನು ಸದರಿ ಹಣವನ್ನು ನಂಜೇಗೌಡ ಹಾಗೂ ಇತರ ಸಾಕ್ಷಿದಾರರ ಮುಂದೆ ಆರೋಪಿಗೆ ನೀಡಿರುತ್ತೇನೆ. ಕರಾರು ಪತ್ರ ಇದ್ದುದರಿಂದ ನಾನು ಯಾವುದೇ ರಸೀದಿ ಆಗಲೀ ದಾಖಲೆ ಆಗಲೀ ಆರೋಪಿ ಇಂದ ತೆಗೆದುಕೊಂಡಿರುವುದಿಲ್ಲ. ಸದರಿ **30** ಲಕ್ಷ ಹಣ ನನ್ನದೇ ಹಣ ಆಗಿರುತ್ತದೆ.

**4.** ನಾನು ಯಾವುದೇ ಆದಾಯ ತೆರಿಗೆಯನ್ನು ಪಾವತಿ ಮಾಡವುದಿಲ್ಲ. ನಾನು **4** ಎಕರೆ ತೋಟದಲ್ಲಿ ವ್ಯವಸಾಯ ಮಾಡುತ್ತೇನೆ. ಸದರಿ ವ್ಯವಸಾಯದಿಂದ ನನಗೆ **18-20** ಲಕ್ಷ ಆದಾಯ ಇರುತ್ತದೆ. ನಾನು **4** ಎಕರೆ ತೋಟದಲ್ಲಿ ಈಗ ಶ್ರೀಗಂದದ ಗಿಡಗಳು ಇದ್ದು ಅವುಗಳನ್ನು **4-5** ವರ್ಷಗಳ ಹಿಂದೆ ಹಾಕಲಾಗಿರುತ್ತದೆ. **4-5**

ವರ್ಷದಿಂದ ಇತ್ತೀಚೆಗೆ ನಾನು ಯಾವುದೇ ಸ್ವತ್ತನ್ನು ಖರೀದಿ ಮಾಡಿರುವುದಿಲ್ಲ. ನಾನು ಹಣ ಕಾಸಿನ ವಿಚಾರದಲ್ಲಿ ಅನುಕೂಲಸ್ತನಲ್ಲ ಎಂದರೆ ಸರಿ ಅಲ್ಲ. ನನಗೆ **30** ಲಕ್ಷ ಹಣವನ್ನು ನೀಡುವ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿ ಅಲ್ಲ. ನನ್ನ ಜಮೀನಿಗೆ ಸಂಬಂದ ಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ವಾರ್ಷಿಕಾಗಿ **15** ರಿಂದ **20** ಲಕ್ಷ ಆದಾಯ ಬರುವ ಯಾವುದೇ ಜಮೀನನ್ನು ನಾನು ಹೊಂದಿಲ್ಲ ಎಂದರೆ ಸರಿ ಅಲ್ಲ.

**5.** ಕರಾರು ಪತ್ರವನ್ನು ದೇವನಹಳ್ಳಿಯ ಸ್ಟ್ಯಾಂಪ್ ವೆಂಡರ್ ನ ಬಳಿ ನಾನು ಮತ್ತು ಆರೋಪಿ ಇಬ್ಬರು ತಯಾರು ಮಾಡಿಸಿರುತ್ತೇವೆ ಎಂದು ಹೇಳುತ್ತಾರೆ. ಎಷ್ಟು ಮುಖಬೆಲೆಯ ಚಾಪಕಾಗದ ಕರಾರು ಪತ್ರವನ್ನು ಮಾಡಿಸಲಾಗಿತ್ತು ಎಂದು ನನಗೆ ನೆನಪಿಲ್ಲ. ಸದರಿ ಚಾಪಕಾಗದವನ್ನು ಎಲ್ಲಿ ಕರೀದಿ ಮಾಡಲಾಗಿರುತ್ತದೆ ಎಂದು ನನಗೆ ನೆನಪಿಲ್ಲ. ದಿನಾಂಕಃ**18.08.2016** ರ ಕರಾರು ಪತ್ರಕ್ಕೆ ಯಾರು ಯಾರು ಸಾಕ್ಷಿದಾರರರಾಗಿದ್ದರು ಎಂದು ನನಗೆ ನೆನಪಿಲ್ಲ. ಕರಾರು ಪತ್ರ ಮಡಿಕೊಳ್ಳಲಾದ ಸ್ವತ್ತಿನಲ್ಲಿ ಹಲವಾರು ವ್ಯಾಜ್ಯಗಳು ಬಾಕಿ ಇರುವುದು ನನಗೆ **2020** ರಲ್ಲಿ ತಿಳಿದುಬಂದಿದ್ದರಿಂದ ನಾನು ಸದರಿ ಸ್ವತ್ತನ್ನು ಕರೀದಿ ಮಾಡಲು ನಿರಾಕರಿಸಿರುತ್ತೇನೆ.

**6.** ಸದರಿ **30** ಲಕ್ಷ ಹಣವನ್ನು ಕರಾರು ಪತ್ರದ ಸಮಯದಲ್ಲಿ ನೀಡಲಾಗಿರುತ್ತದೆ ಎಂದು ಹೇಳಿದ್ದು ಏಕೆ ಆ ಸಮಯದಲ್ಲಿ ಕ್ರಯ ಪತ್ರವನ್ನು ಮಾಡಿಸಿಕೊಂಡಿಲ್ಲ ಎಂದರೆ ಸಾಕ್ಷಿ ರತ್ನಮ್ಮನವರು ನಮ್ಮ ಕುಟುಂಬದಲ್ಲಿ ಇನ್ನು ಬಾಗಗಳು ಆಗಿಲ್ಲ ಎಂದು ಹೇಳಿದ್ದು ಆಗ ಆಕೆ ಆಸ್ಪತ್ರೆಯಲ್ಲಿ ಚಿಕಿತ್ಸೆಗಳನ್ನು ತೆಗೆದುಕೊಳ್ಳುತ್ತಿದ್ದರಿಂದ ಮುಂದೂಡಲಾಗಿದೆ ಎಂದು ಹೇಳುತ್ತಾರೆ. ಕರಾರು ಪತ್ರದಲ್ಲಿ ಎಷ್ಟು ವಾಯ್ದೆ ಒಳಗೆ ಕ್ರಯ ಪತ್ರವನ್ನು ಮಾಡಿಕೊಡಬೇಕು ಎಂದು ನಮೂದಾಗಿರತ್ತು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಕರಾರು ಪತ್ರವನ್ನು ವಾಪಸು ನೀಡಿದ್ದೇನೆ ಎಂದು ಹೇಳುತ್ತಾರೆ

**7.** ಕರಾರು ಪತ್ರವನ್ನು ನಾನು ಆರೋಪಿಗೆ ಸಾಕ್ಷಿದಾರರ ಸಮಕ್ಷಮ **2021** ರಲ್ಲಿ ವಾಪಸು ನೀಡಿದ್ದು ಆರೋಪಿ ನನಗೆ ದಿನಾಂಕ **01.09.2021** ರಲ್ಲಿ ಚೆಕ್ಕನ್ನು ನೀಡಿರುವುದಾಗಿ ಹೇಳುತ್ತಾರೆ. ಕರಾರು ಪತ್ರವನ್ನು ವಾಪಸು ನೀಡುವಾಗ ಯಾರು ಯಾರು ಸಾಕ್ಷಿದಾರರು ಇದ್ದರು ಎಂದರೆ ಸಾಕ್ಷಿ ದೇವನಹಳ್ಳಿಯ ನಂಜೇಗೌಡರು ಹಾಗೂ ಆರೋಪಿಯು ಊರಿನವರಲ್ಲಿ ಸುಮಾರು **3-4** ಜನರು ಇದ್ದರು ಎಂದು

ಹೇಳುತ್ತಾರೆ. ಕರಾರು ಪತ್ರವನ್ನು ಆರೋಪಿಯ ಊರಾದ ಲಿಂಗನಹಳ್ಳಿ ನಾನು ಮತ್ತು ದೇವನಹಳ್ಳಿ ನಂಜೇಗೌಡರು ಹೋಗಿ ನೀಡಿರುತ್ತೇವೆ. ಸದರಿ ಕರಾರು ಪತ್ರವನ್ನು ಹಿಂತಿರುಗಿಸಿ ಆರೋಪಿ ಇಂದ ಚೆಕ್ಕನ್ನು ಪಡೆದುಕೊಂಡ ಬಗ್ಗೆ ಯಾವುದೇ ಬರವಣಿಗೆ ಆಗಿರುವುದಿಲ್ಲ. ಸದರಿ ಕರಾರು ಪತ್ರವನ್ನು ನಾನು ಮುಸುಮಾರು **12** ಗಂಟೆ ಸಮಯದಲ್ಲಿ ವಾಪಸು ನೀಡಿರಬಹುದು.

**8.** ಆರೋಪಿ ನನಗೆ ನೀಡಿದ ಚೆಕ್ಕನ್ನು ನಾನು ಮೇಲೂರಿನ ಕೆನರಾ ಬ್ಯಾಂಕಿಗೆ ನಗದೀಕರಣಕ್ಕಾಗಿ ಸಲ್ಲಿಸಿದ್ದೆ. ಸದರಿ ಬ್ಯಾಂಕು ಲಿಂಗನಹಳ್ಳಿ ಇಂದ ಸುಮಾರು **20-30** ಕಿ.ಮೀ ಅಂತರದಲ್ಲಿರುತ್ತದೆ. ನಾನು ಮೇಲೆ ಹೇಳಿರುವ ಕ್ರಯದ ಕರಾರು ವ್ಯವಹಾರ ನನ್ನ ಮತ್ತು ಆರೋಪಿ ಹಾಗೂ ಆತನ ತಾಯಿಯ ಮಧ್ಯೆ ನಡೆದಿಲ್ಲ ಎಂದರೆ ಸರಿ ಅಲ್ಲ. ದಿಃ**18.08.2016** ರ ಪೂರ್ವದಲ್ಲಿ ಯಾವುದೇ ಹಣದ ವವಹಾರ ಸಹ ನನ್ನ ಹಾಗೂ ಆರೋಪಿ ಮತ್ತು ಆತನ ತಾಯಿಯ ಮಧ್ಯೆ ನಡೆದಿಲ್ಲ ಎಂದರೆ ಸರಿ ಅಲ್ಲ. ಸಾಕ್ಷಿ ಮುಂದುವರಿದು ನನ್ನ ಬಳಿ ಸದರಿ ಕರಾರು ಪತ್ರದ ಜೆರಾಕ್ಸ್ ಪ್ರತಿ ಇರುವುದಾಗಿ ಹೇಳುತ್ತಾರೆ. ನನ್ನ ಮತ್ತು ಆರೋಪಿ ಮತ್ತು ಆತನ ತಾಯಿಯ ಮಧ್ಯೆ ಯಾವುದೇ ಕರಾರು ಪತ್ರದ ವ್ಯವಹಾರ ನಡೆಯದೇ ಇರುವುದರಿಂದ ನಿಪಿ.**1** ನ್ನು ನೀಡಿರುವುದಿಲ್ಲ ಎಂದರೆ ಸರಿ ಅಲ್ಲ. ಹಾಗಾಗಿ ಯಾವುದೇ ಮುಂಗಡ ಹಣವನ್ನು ತೆಗೆದುಕೊಳ್ಳದೇ ಇರುವುದರಿಂದ ಹಣವನ್ನು ಹಿಂತಿರುಗಿಸುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿ ಅಲ್ಲ. ನಾನು ವಾಮಮಾರ್ಗದಿಂದ ನಿಪಿ.**1** ನ್ನು ಪಡೆದುಕೊಂಡು ಅಕ್ರಮ ಲಾಭ ಪಡೆಯುವ ಸಲುವಾಗಿ ಹಾಗೂ ಆರೋಪಿಗೆ ತೊಂದರೆ ನೀಡುವ ಸಲುವಾಗಿ ಈ ಪಿರ್ಯಾದನ್ನು ಸಲ್ಲಿಸಿದ್ದೇನೆ ಎಂದರೆ ಸರಿ ಅಲ್ಲ.

ಮುಂದುವರಿದ ಪಾಟೀಸವಾಲಿಗಾಗಿ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.-

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು.)

ಓ ಹೇ ಕೇ ಸ ಇದೆ.

ಪ್ರಧಾನ ಸಿ. ನ್ಯಾ. ಮತ್ತು
ಜೆಎಂಎಫ್, ಶಿಡ್ಲಘಟ್ಟ